ಬಾ.ರಂ. ಸುರೇಶ್, ಶಿವಮೊಗ್ಗ
*ಕನಸಿನಲ್ಲಿ ದೇವರಿಗಿಂತ ಹುಡುಗಿಯರು, ಆಂಟಿಯರು ಕಾಣಿಸಿಕೊಂಡು ಕಾಡುತ್ತಾರಲ್ಲ, ಏಕೆ?*



ದೇವರದು ಅಸ್ಪಷ್ಟ ರೂಪ, ಇವರದು ಅತಿ ಸ್ಪಷ್ಟ ರೂಪ ಆಗಿರುವುದರಿಂದ.

ಜಿ.ಆರ್.ಆದಿನಾರಾಯಣಮುನಿ, ಬೆಂಗಳೂರು
*ಹೃದಯವೇ ಜ್ವಾಲಾಮುಖಿಯಾದರೆ?*
ವಿವೇಕವೇ ಸುನಾಮಿಯಾಗಬೇಕು.

ನೀಹಾರ್ ಮಂಜುನಾಥ, ಆನೆಗುಂದಿ
*ಆಶೀರ್ವಾದ ನೀಡುವ ಮಠಾಧೀಶರಿಗೂ, ಆಶ್ವಾಸನೆ ನೀಡುವ ರಾಜಕಾರಣಿಗಳಿಗೂ ವ್ಯತ್ಯಾಸವೇನು?*
ಅವರು ಗುರು; ಇವರು ಕುರು.

ಅಜಯ್, ಬೆಂಗಳೂರು
*ಸನ್ಯಾಸಿಗಳಿಗೂ, ರಾಜಕಾರಣಿಗಳಿಗೂ ಇರುವ ಸಂಬಂಧವೇನು?*
ಸನ್ಯಾಸಿ ಜೇನುಗೂಡು; ಜನತೆ ಜೇನು; ರಾಜಕಾರಣಿ ಕರಡಿ.

ವಿ. ಹೇಮಂತಕುಮಾರ್, ಬೆಂಗಳೂರು
*ವಿಧಾನಸೌಧವನ್ನು ಕರ್ನಾಟಕದ ಕಿರೀಟ ಎನ್ನಬಹುದಲ್ಲವೆ?*




ನಿಜ. ಜೊತೆಗೆ ಅಲ್ಲಿರುವ ಹಲವರನ್ನು ಕಿರಿಕಿರಿಯ ಕೀಟ ಎನ್ನಬಹುದು.

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಇಲ್ಲೊಬ್ಬ ಕಾರಲ್ಲಿ ಬಾರ್‌ಗೆ ಹೋಗಿ ಕಾಲ್ನಡಿಗೆಯಲ್ಲಿ ಹಿಂತಿರುಗುವನಲ್ಲ, ಏನಿರಬಹುದು ಕಾರಣ?*
ಕುಡಿದ ಮತ್ತಿನಲ್ಲಿ ಡೋರ್‌ಲಾಕನ್ನೇ ಇಗ್ನಿಷನ್ನೆಂದುಕೊಂಡು ಕೀ ತಿರುತಿರುಗಿಸಿ 'ಸ್ಟಾರ್ಟಾಗ್ತಿಲ್ಲ' ಎಂದುಕೊಳ್ಳುವನಂತೆ.

ಎ. ಕೃಷ್ಣಾನಂದ ಶೆಟ್ಟಿ, ಮುಲ್ಕಿ
*ಹೂಬಾಣ ಭೂಬಾಣ ಆಗುವುದು ಯಾವಾಗ?*
ಬಾಲ ಅಲ್ಲಾಡಿಸುವವನು ಬಾಲ ಬಿಚ್ಚಲು ಆರಂಭಿಸಿದಾಗ.

ರಮೇಶ್, ಹನುಮನಾಳು
*ತಾಯಿ ಕಣ್ಣಿಗೆ ಕಾಣುವ ದೇವರು. ತಂದೆ?*
ಆ ದೇವರನ್ನು ಮಕ್ಕಳಿಗಿತ್ತ ಶಿಲ್ಪಿ.

ಎಸ್.ಎನ್. ಮಹಾಬಲರಾವ್, ಅಗ್ರಹಾರ
*ಹಳೆಯ ಗಾಯ ವಾಸಿ ಆಗಿದೆ. ಹಳೆಯ ಹುಡುಗಿ ಹಾಗೇ ಇದೆ...?*
ಚಿಂತಿಸಬೇಡಿ. ಅದೇ ಹಳೇ ಚಾಳಿ ತೋರಿಸಿ, ಹೊಸ ಗಾಯ ಬಳುವಳಿ ನೀಡುತ್ತಾಳೆ.

ಸಾವಿತ್ರಮ್ಮ ವಿಭೂತಿ, ಹರಿಹರ
*ವಿಜ್ಞಾನಿಯ ಮನಸ್ಸಿಗೂ, ಕವಿಯ ಮನಸ್ಸಿಗೂ ಅಂತರವೇನು?*
ವಿಜ್ಞಾನಿಯದು ಏಕಮುಖದ ರಾಷ್ಟ್ರೀಯ ಹೆದ್ದಾರಿ; ಕವಿಯದು ಥೀಮ್ ಪಾರ್ಕ್‌ಗಳ ರೋಲರ್ ಕೋಸ್ಟರ್.

ಅಮರಯ್ಯಾ ಪತ್ರಿಮಠ, ಸುರಪೂರ
*ಎಂಟೆದೆ ಭಂಟ ಯಾರು?*
ಒದೆ, ಗದೆ, ಪೊದೆ, ಬೆದೆ, ಮದೆ, ಸದೆ, ಸೇದೆ, ಹೆದೆಗಳೆಂಬ 8 'ದೆ'ಗಳನ್ನು ಹೊಕ್ಕು, ಎದುರಿಸಿ ಜೈಸುವವರು.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಮುಟ್ಟಿದ್ದೆಲ್ಲಾ ಚಿನ್ನ ಆಗುವಂತಿದ್ದರೆ ಹೇಗಿರುತ್ತಿತ್ತು?*
ಚಿನ್ನ ಕಸಕ್ಕಿಂತ ಕೀಳಾಗುತ್ತಿತ್ತು.

ಹೆಚ್.ಎಂ. ಅನಂತಪದ್ಮನಾಭ, ಮೈಸೂರು
*ಬುದ್ಧಿಜೀವಿಗಳ ಗಡ್ಡಕ್ಕೂ, ಭೂಮಿಯೊಳಗೆ ಬೆಳೆಯುವ ಗೆಡ್ಡೆಗೂ ಸಂಬಂಧವೇನು?*
ಎರಡನ್ನು ಕಂಡಾಗಲೂ ಕೀಳಬೇಕೆಂಬ ಉತ್ಕಟ ಬಯಕೆ ಉಂಟಾಗುತ್ತದೆ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಕುರಿ ಮತ್ತು ದನ ಕಾಯಲು ಆಧಾರ್ ಕಾರ್ಡ್ ಕೇಳಿದರೆ?*
ತಂದಿದ್ದೆ, ನಗರದ ಹಸುಗಳು ಅಭ್ಯಾಸಬಲದಿಂದ ಹುಲ್ಲಿನ ಬದಲು ಪ್ಲಾಸ್ಟಿಕ್ಕನ್ನೇ ತಿಂದುಬಿಟ್ಟವು ಎನ್ನಿ!

## ಬಹುಮಾನಿತ ಪ್ರಶ್ನೆ

ನರಸಿಂಹ ಪೈ, ಕಾಸರಕೋಡ
*ನೀರು ದೇವರು ಕೊಟ್ಟ ಒಂದು ವರ. ಏಕೆ?*
ಕ್ಷಮಿಸಿ; ಹುಟ್ಟಿದ ಕಡೆಗೂ, ಸೇರಿದ ಕಡೆಗೂ ಒಳಿತು ಮಾಡುವುದರಿಂದ ಅದು ವರ ಅಲ್ಲ, ವಧು.

ಸವಿತಾ ರವಿ, ಸುಟ್ಟಟ್ಟಿ
*ನಗು ಎನ್ನುವುದು ಒಂದು ಹೆಣ್ಣಿಗೆ ಹೇಗಿರಬೇಕು ಸರ್?*
ಮುಂಜಾನೆಯ ಕಿರಣದಂತೆ – ಬೆಚ್ಚನೆಯ ಅನುಭವ ನೀಡಬೇಕು; ಹಾಟ್ ಎನಿಸಬಾರದು.

ಪಿ. ಚಿದಾನಂದ, ಚಿತ್ರದುರ್ಗ
*ಮೊದಲು 'ಪ್ರೀತಿ ಇದ್ರೇನೇ ಜೀವನ' ಎನ್ನುತ್ತಿದ್ದವನು ಈಗ 'ದುಡ್ಡು ಇದ್ರೇನೇ ಜೀವನ' ಎನ್ನುತ್ತಿದ್ದಾನಲ್ಲಾ...?*
ಮೀನ್ ಮೆಂಟಾಲಿಟಿ! ಮೊದಲನೆಯದು ವಿದ್ಯಾವಂತೆಗೆ ಗಾಳ; ಎರಡನೆಯದು ಸಂಬಳಾಕಾಂಕ್ಷೆಯ ರೋಸ್ಟಿಂಗ್.

ಕುಮಾರ ಚಲವಾದಿ, ಹೊಳೆನರಸಿಪುರ
*ನಿಮ್ಮ ಮನೆಯಲ್ಲಿ ಯಾರು ಹೆಚ್ಚು ಮಾತನಾಡುವುದು?*



ಎಫ್‌ಎಂ ರೇಡಿಯೋದ ಆರ್‌ಜೆಗಳು. ನಿಮ್ಮಲ್ಲಿ?

ಎಂ.ಕೆ. ಗಿರೀಶ್, ಚನ್ನಗಿರಿ
*ಹೆಂಗಸರು ಯಾಮಾರಿಸುತ್ತಾರೆ ಎಂದು ಗೊತ್ತಿದ್ದೂ ಗಂಡಸರೇಕೆ ಯಾಮಾರುತ್ತಾರೆ?*
ಜಾರುಬಂಡೆ ಆಟವೇ ಹಾಗೆ; ಕೆಳಗೆ ಮಣ್ಣಿಗೆ ತಲುಪುವುದೆಂದು ತಿಳಿದಿದ್ದರೂ ಜಾರುವಾಗಿನ ಸುಖವೇ ಸುಖ.

ಹಾಡ್ಯ ಬ. ಜಯಾನಂದ, ಮೈಸೂರು
*ಕೆಎಂಎಫ್ ಡೈರಿಗೂ, ಎಂಎಲ್‌ಎಗಳ ಡೈರಿಗೂ ಏನು ವ್ಯತ್ಯಾಸ?*
ಇಲ್ಲಿ ಹಾಲು, ಮೊಸರು, ತುಪ್ಪ; ಅಲ್ಲಿ ಹಾಳು, ಕೆಸರು, ಕಪ್ಪ.

■ ರಾಮ್